# ಶ್ರೀ ರಾಘವೇಂದ್ರ ತೀರ್ಥ ವಿರಚಿತ ಗೀತಾವಿವೃತಿ ಗ್ರಂಥದಲ್ಲಿ ಬ್ರಹ್ಮಸೂತ್ರಗಳ ಉಲ್ಲೇಖನೆ

(ಗಿರಿಧರ್ ಬೊರೆ: gboray@gmail.com)

ಶ್ರೀ ವೇದವ್ಯಾಸರು ರಚಿಸಿದ ಮಹಾಭಾರತದ ಸಾರ ಗ್ರಂಥವೆಂದೇ ಭಗವದ್ಗೀತೆಯ ಹಿರಿಮೆ. ಭಾರತೀಯ ಅಧ್ಯಾತ್ಮ ಚಿಂತನೆಯಲ್ಲಿ ಅತಿ ಮುಖ್ಯ ಸ್ಥಾನದಲ್ಲಿರುವ ಗೀತೆಗೆ ಅನೇಕ ದಾರ್ಶನಿಕರು ವ್ಯಾಖ್ಯಾನಿಸಿದ್ದರೆ, ಗೀತಾಚಾರ್ಯನ ಉಪದೇಶವನ್ನು ಯಥಾರ್ಥವಾಗಿ ವಿವರಿಸಲು ಶ್ರೀ ಮಧ್ವಾಚಾರ್ಯರು ಗೀತಾ ಭಾಷ್ಯ ಮತ್ತು ಗೀತಾ ತಾತ್ಪರ್ಯ ನಿರ್ಣಯ ಎಂಬ ಗ್ರಂಥಗಳನ್ನು ರಚಿಸಿ ಸಾಧಕರಿಗೆ ಉಪಕರಿಸಿರುವರು. ಶ್ರೀ ಮಧ್ವಾಚಾರ್ಯರ ಚಿಂತನೆಗೆ ಅನುಗುಣವಾಗಿ ಗೀತೆಯ ಅನೇಕ ಕಠಿಣ ಪ್ರಮೇಯಗಳನ್ನು ಸುಲಭ ರೀತಿಯಲ್ಲಿ ವಿವರಿಸಲು ಶ್ರೀ ರಾಘವೇಂದ್ರ ತೀರ್ಥರು 'ಗೀತಾವಿವೃತಿ' ಎಂಬ ಉತ್ತಮ ಗ್ರಂಥವನ್ನು ರಚಿಸಿ ಸಾಧಕರಿಗೆ ಇನ್ನಷ್ಟು ಉಪಕರಿಸಿರುವರು. ಶ್ರೀ ರಾಯರು ಗೀತೆಯ ಮುಖ್ಯ ಪ್ರಮೇಯಗಳನ್ನು ವಿವರಿಸುವಾಗ ಅನೇಕ ಪ್ರಾಚೀನ ಗ್ರಂಥಗಳನ್ನು ಪ್ರಮಾಣವಾಗಿ ಉಲ್ಲೇಖಿಸಿರುವರು. ಎಲ್ಲಾ ವೈದಿಕರು ಒಪ್ಪುವ ಅನೇಕ ವೇದಗಳ, ಉಪನಿಶತ್, ಬ್ರಹ್ಮಸೂತ್ರ ಮುಂತಾದ ಪ್ರಾಚೀನ ಗ್ರಂಥಗಳ ಆಧಾರದಿಂದ ಗೀತೆಯ ಮುಖ್ಯ ಪ್ರಮೇಯಗಳಿಗೆ ನಿರ್ಣಯ ನೀಡಿರುವರು. ಅದರಲ್ಲೂ ಶ್ರೀ ವೇದವ್ಯಾಸ ರಚಿತ ಮಹಾ ಭಾರತದ ಸಾರವಾದ ಗೀತೆಯ ನಿಜವಾದ ಅರ್ಥವನ್ನು ನಿರ್ಣಯಿಸಲು ಶ್ರೀ ವೇದವ್ಯಾಸರಿಂದಲೇ ರಚಿತವಾದ ಬ್ರಹ್ಮ ಸೂತ್ರಗಳನ್ನೇ ಶ್ರೀ ರಾಯರು ಉಲ್ಲೇಖಿಸಿರುವಿದು  ಅತಿ ಸಮಂಜಸ.

ಗೀತೆಯ 27 ಶ್ಲೋಕಗಳ ವ್ಯಾಖ್ಯಾನದಲ್ಲಿ ಒಟ್ಟು 36 ಸಲ ಬ್ರಹ್ಮ ಸೂತ್ರಗಳ ಉಲ್ಲೇಖವಿರುವುದು (34 ವಿಭಿನ್ನ ಬ್ರಹ್ಮ ಸೂತ್ರಗಳು ಹಾಗೂ ಎರಡು ಸೂತ್ರಗಳ ಉಲ್ಲೇಖ ಎರಡು ಸಲ).  ಗೀತೆಯ ಶ್ಲೋಕಗಳಲ್ಲಿ ಅಡಗಿರುವ ಮುಖ್ಯ ಪ್ರಮೇಯಗಳನ್ನು ಯಾವ ರೀತಿ ಶ್ರೀ ರಾಯರು ಬ್ರಹ್ಮಸೂತ್ರಗಳ ಆಧಾರದಿಂದ ಸ್ಪಷ್ಟೀಕರಿಸಿರುವರು ಎಂಬುದನ್ನು ತೋರಿಸುವ ಕಿರು ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

**ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣ: |**

**ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ||** **(ಗೀತಾ 2-18)**

**ಅರ್ಥ:** (ಹೇ ಅರ್ಜುನನೇ) ಜೀವರ ಸ್ವರೂಪವು ನಿತ್ಯವಾದರೂ, ಅವರ ಈ ಬಾಹ್ಯ ಶರೀರವು ನಾಶವುಳ್ಳದ್ದೇ. ಪರಮಾತ್ಮನಾದರೋ ನಾಶರಹಿತನು, ಸರ್ವೋತ್ತಮನು. ಆದ್ದರಿಂದ (ಅವನ ಪೂಜಾರ್ಥವಾಗಿ) ಯುದ್ಧ ಮಾಡು.

**ವಿವರಣೆ:** ಜೀವರ ಸ್ವರೂಪಾತ್ಮವು ಪರಮಾತ್ಮನ ಪ್ರತಿಬಿಂಬವು ಹಾಗೂ ನಿತ್ಯವು , ಆದರೆ ಜೀವರ ಭೌತಿಕ ದೇಹಗಳು ನಶ್ವರವೇ. ಪರಮಾತ್ಮನಿಗೆ ಹಾಗಲ್ಲ. ಈ ಪ್ರಮೇಯವನ್ನು ವಿವರಿಸಲು ಶ್ರೀ ರಾಯರು ಬ್ರಹ್ಮ ಸೂತ್ರವನ್ನು ಸೂತ್ರವನ್ನು ಉಲ್ಲೇಖಿಸಿರುವರು

**ಓಂ || ಯಾವದಾತ್ಮ ಭಾವಿತ್ವಾತ್ ಚ ನ ದೋಷ: ತದ್ದರ್ಶನಾತ್ || ಓಂ** **(ಸೂತ್ರ 2-3-30)**

**ಯಾವದಾತ್ಮ ಭಾವಿತ್ವಾತ್** = ಪರಮಾತ್ಮನು ಇರುವಾಗಲೆಲ್ಲ ಇರುವ ಜೀವನ ಸ್ವರೂಪ ಉಪಾಧಿಯೂ ಇದ್ದೇ ಇರುತ್ತದೆ. ನ **ದೋಷ:** = ಜೀವನ ಉಪಾಧಿಗೆ ಉತ್ಪತ್ತಿ ಹೇಳುವ ಶ್ರುತಿಗಳಿದ್ದರೇ ಅವುಗಳು ಜೀವನ ಬಾಹ್ಯ ಉಪಾಧಿಗೆ ಸೇರಿದ್ದು, ಆದ್ದರಿಂದ ಜೀವನ ಸ್ವರೂಪ ಭೂತ ಉಪಾಧಿ ಪರಮಾತ್ಮನ ಪ್ರತಿಬಿಂಬವಾಗಿ ನಿತ್ಯ ಎನ್ನುವುದರಿಂದ ದೋಷವಿಲ್ಲ.  ಯಾವ ಕಾರಣದಿಂದ ಅಂದರೆ **ತದ್ದರ್ಶನಾತ್ ಚ** = ದರ್ಶನಗಳಲ್ಲಿ  ('ನಿತ್ಯ: ಪರೋ ನಿತ್ಯೋ ಜೀವಃ' ಎಂಬ ಶ್ರುತಿ  ಮತ್ತು 'ಆತ್ಮಾ ನಿತ್ಯ: ಸುಖದುಃಖೇ ತ್ವನಿತ್ಯೇ' ಎಂಬ ಸ್ಮೃತಿಗಳಲ್ಲಿ) ಹೇಳಿರುವುದರಿಂದ.

**ಪುರುಷ: ಸ: ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।**

**ಯಸ್ಯಾಂತ:ಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಂ ॥** **(ಗೀತಾ 8-22)**

**ಅರ್ಥ:** (ಹೇ ಅರ್ಜುನನೇ) ಸಮಸ್ತ ಪ್ರಾಣಿಗಳೂ, ವಸ್ತುಗಳೂ ಯಾರೊಳಗೆ ಇರುವವೋ, ಯಾರಿಂದ ಈ ಸಮಸ್ತ ಜಗತ್ತು ವ್ಯಾಪ್ತವಾಗಿದೆಯೋ, ಅ ಸರ್ವೋತ್ತಮನಾದ ಪುರುಷನು, ಅನ್ಯಯಾ = ಅನ್ಯ ದೇವತೆಗಳ ವಿಷಯಕವಾಗಲ್ಲದ, ಅ ಪರ ಪುರುಷನ ವಿಷಯಕವಾದ **ಭಕ್ತಿಯಿಂದ ಮಾತ್ರ** ದೊರೆಯಲ್ಪಡುವವನು.

**ವಿವರಣೆ:** ಸಾಧನೆಗೆ ಅನೇಕ ಮಾರ್ಗಗಳಿದ್ದರೂ, ಭಗವದ್ದರ್ಶನಕ್ಕೆ ಭಕ್ತಿಯೇ ಪ್ರಧಾನ ಕಾರಣವಾದರೂ ಅದು ಸ್ವತಂತ್ರ ಕಾರಣವಲ್ಲ, **ಪರಮಾತ್ಮನ ಪ್ರಸಾದವೇ ಮುಖ್ಯ ಕಾರಣ** ಎಂಬ ಪ್ರಮೇಯವನ್ನು ವಿವರಿಸಲು ಶ್ರೀ ರಾಯರು ಬ್ರಹ್ಮ ಸೂತ್ರವನ್ನು ಹೀಗೆ ಉಲ್ಲೇಖಿಸಿರುವರು.

**ಓಂ ॥ ಪರೇಣ ಚ ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬಂಧ: ॥ ಓಂ** **(ಸೂತ್ರ 3-3-54)**

(ಪರಮಾತ್ಮನ ದರ್ಶನಕ್ಕೆ) **ಅನುಬಂಧ:** = ಭಕ್ತಿಯೇ, **ಭೂಯಸ್ತ್ವಾತ್** = ಪ್ರಧಾನವಾದರೂ, **ಪರೇಣ ಚ** = ಪರಮಾತ್ಮನ ಅನುಗ್ರಹವೇ ಮುಖ್ಯ ಕಾರಣ. **ಶಬ್ದಸ್ಯ ತಾದ್ವಿಧ್ಯಂ ತು** = ಭಕ್ತಿರೇವ ಎಂಬ ಶ್ರುತಿಗಳಲ್ಲಿ ಭಕ್ತಿಯೇ ಭಗವದ್ದರ್ಶನಕ್ಕೆ ಕಾರಣ ಎಂದಿರುವಾಗ, 'ರಾಮನ ಬಾಣ ಕೊಂದಿತು' ಎಂಬ ವಾಕ್ಯದಂತೆ ಭಕ್ತಿಯು ಔಪಚಾರಿಕ ಮತ್ತು ಪರಮಾತ್ಮನ ಪ್ರಸಾದವೇ ಮುಖ್ಯ ಕಾರಣ ಎಂದು ತಿಳಿಯಬೇಕು ಎಂದು ಶ್ರೀ ರಾಯರು ವಿವರಿಸಿರುವರು.

**ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸ: ಪರಮುಚ್ಯತೇ ।**

**ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಂ ॥** **(ಗೀತಾ 13-18)**

**ಅರ್ಥ: (**ಮೋಕ್ಷಕ್ಕಾಗಿ) ತಿಳಿಯಲ್ಪಡಬೇಕಾದ ಈ ಪರ ಬ್ರಹ್ಮನು ಸೂರ್ಯಾದಿಗಳಿಗೂ ಪ್ರಕಾಶ ಕೊಡುವವನೂ, ತಮಾದಿ ಪ್ರಕೃತಿ ಗುಣಗಳನ್ನು ಮೀರಿದವನು ಎಂದು (ಶ್ರುತಿಗಳಲ್ಲಿ) ಹೇಳಲ್ಪಡುವವನು. ಅವನು ಜ್ಞಾನರೂಪನು, ಸ್ವಪ್ರಕಾಶನೂ, ಹಾಗೂ ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೆಲೆ ನಿಂತಿರುವವನು.

**ವಿವರಣೆ:** ಪರಮಾತ್ಮನು ಸರ್ವಗತನಾಗಿದ್ದರೂ, ಅಣು ರೂಪದಿಂದ ಸಮಸ್ತ ಪ್ರಾಣಿಗಳ ಹೃದಯದಲ್ಲೂ ಇರುವನು ಎಂಬ ಪ್ರಮೇಯವನ್ನು ಸಮರ್ಥಿಸಲು ಶ್ರೀ ರಾಯರು, ಬ್ರಹ್ಮ ಸೂತ್ರಗಳನ್ನು ಹೀಗೆ ಉಲ್ಲೇಖಿಸಿರುವರು.

**ಓಂ ॥ ಆರ್ಭಕೌಕಸ್ತ್ವಾತ್ ತದ್ ವ್ಯಪದೇಶಾಚ್ಚನೇತಿ ಚೇನ್ನ ನಿಚಾಯ್ಯತ್ವಾದೇವಂ ವ್ಯೋಮವಚ್ಚ ॥ಓಂ (ಸೂತ್ರ1-2-7)**

**ಆರ್ಭಕೌಕಸ್ತ್ವಾತ್ ವ್ಯಪದೇಶಾತ್** = ಅಲ್ಪವಾದ ಸ್ಥಾನದಲ್ಲಿರುವಿಕೆಯನ್ನು (ಸರ್ವ ಪ್ರಾಣಿಗಳ ಹೃದಯದಲ್ಲಿ ಇರುವಿಕೆಯನ್ನು) ಉಪದೇಶಿಸಿರುವುದರಿಂದ, ಎಲ್ಲೆಡೆ ವ್ಯಾಪ್ತನಾದ ಪರಮಾತ್ಮನು ಸೂಕ್ಷ್ಮ ಹೃದಯದಲ್ಲಿ ಅಂತರ್ಯಾಮಿಯಾಗಿರಿವುದು ಸಾಧ್ಯವಿಲ್ಲ ಎಂದು ಶಂಕಿಸಿದರೆ, **ನಿಚಾಯ್ಯತ್ವಾದೇವಂ** = (ಪರಮಾತ್ಮನಿಗೆ) ಸೂಕ್ಷ್ಮ ಸ್ಥಾನದಲ್ಲಿರುವಿಕೆ ಆಯುಕ್ತಿಯಲ್ಲ , ಎಕೆಂದರೆ, **ವ್ಯೋಮವಚ್ಚ** = ವ್ಯಾಪ್ತವಾಗಿದ್ದರೂ ಆಕಾಶವು ಒಂದೊಂದು ದೇಶದಲ್ಲೂ ಇರುವ ಹಾಗೆ, ಪರ ಬ್ರಹ್ಮನು ಸರ್ವ ವ್ಯಾಪ್ತನಾಗಿದ್ದರೂ, ಅಣು ರೂಪದಿಂದ ಸರ್ವ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವನು ಎಂಬ ಭಾವ.

ಪರಮಾತ್ಮನಲ್ಲಿ ಅಣುತ್ವ, ಮಹತ್ತ್ವ ಎರಡೂ ಗುಣಗಳು ಇರುವುದು ಹೇಗೆ ಸಾಧ್ಯ ಎಂಬ ಪ್ರಶ್ನೆ ಬಂದರೆ ಉತ್ತರವಾಗಿ ಇನ್ನೊಂದು ಸೂತ್ರವನ್ನು ಉಲ್ಲೇಖಿಸಿರುವರು.

**ಓಂ || ಅನ್ಯಭಾವವ್ಯಾವೃತ್ತೇಶ್ಚ || ಓಂ** **(ಸೂತ್ರ 1-3-12)**

**ಅನ್ಯಭಾವವ್ಯಾವೃತ್ತೇ:** = (ಪರ ಬ್ರಹ್ಮನು) ಇತರ ವಸ್ತುಗಳಿಗಿಂತ ವಿಲಕ್ಷಣನಾಗಿರುವುದರಿಂದ, (ಅವನು ಅಣುವೂ ಆಗಿರುವನು, ಮಹತ್ತೂ ಆಗಿರುವನು).

**ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಂ |**

**ನ ಹಿನಸ್ತ್ಯಾತ್ಮನಾಽತ್ಮಾನಂ ತತೋ ಯಾತಿ ಪರಾಂ ಗತಿಮ್ ||** **(ಗೀತಾ 13-29)**

**ಅರ್ಥ:** (ಯಾವ ಜ್ಞಾನಿಯು) ಪರಮಾತ್ಮನು ಎಲ್ಲೆಡೆ ಏಕ ಪ್ರಕಾರವಾಗಿ ದೋಷರಹಿತ, ಸದ್ಗುಣಪೂರ್ಣನಾಗಿ ಇರುವವನು ಎಂದು ತಿಳಿದಾಗ, ಸ್ವಬುದ್ಧಿಯಿಂದ ಅಧೋಗತಿಗಿಳಿಯದೆ, ಉತ್ತಮವಾದ ಗತಿಯನ್ನು ಹೊಂದುವನು.

**ವಿವರಣೆ:** ಜೀವರುಗಳಿಗೆ ಸ್ಥಾನ ಬೇಧವಿದ್ದರೂ, ಅವುಗಳ ಅಂತರ್ಯಾಮಿಯಾದ ಪರಮಾತ್ಮನಿಗೆ ರೂಪ ಬೇಧವಿಲ್ಲ ಎಂಬ ಪ್ರಮೇಯವನ್ನು ಸಮರ್ಥಿಸಲು ಶ್ರೀ ರಾಯರು ಬ್ರಹ್ಮ ಸೂತ್ರವನ್ನು ಉಲ್ಲೇಖಿಸಿರುವರು.

**ಓಂ || ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ || ಓಂ** **(ಸೂತ್ರ 3-2-11)**

**ಸ್ಥಾನತೋಽಪಿ** = (ದೇವತೆಗಳಿಗೆ, ಮಾನವರಿಗೆ, ಪ್ರಾಣಿಗಳಿಗೆ) ಸ್ಥಾನ ಬೇಧವಿದ್ದರೂ, **ಪರಸ್ಯ** = (ಅವುಗಳ ಅಂತರ್ಯಾಮಿಯಾದ) ಪರಮಾತ್ಮನಿಗೆ, **ಉಭಯ=** ಭಿನ್ನ, **ಲಿಂಗಂ** = ರೂಪಗಳು, ನ = ಇಲ್ಲ, **ಸರ್ವತ್ರ ಹಿ** = ಎಲ್ಲೆಡೆ ಇರುವ ಪರಮಾತ್ಮನು ನಿರ್ದೋಷನೂ, ಅಶೇಷಗುಣಪೂರ್ಣನೂ, ಬೇಧರಹಿತನೂ ಎಂಬುದಾಗಿ 'ಸರ್ವ ಭೂತೇಷು ಏತಮೇವ ಬ್ರಹ್ಮ' ಮುಂತಾದ ಶ್ರುತಿಗಳಲ್ಲಿ ಹೇಳಿರುವುದರಿಂದ.

**ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಾಮಾಣಾನಿ ಸರ್ವಶಃ |**

**ಯಃ ಪಶ್ಯತಿ ತಥಾಽತ್ಮಾನಮಕರ್ತಾರಂ ಸ ಪಶ್ಯತಿ ||** **(ಗೀತಾ 13-30)**

**ಅರ್ಥ:** ಯಾವ ಜೀವಿಯು ಎಲ್ಲ ಕರ್ಮಗಳನ್ನು ಪರಮಾತ್ಮನಿಂದ, ಪೂರ್ವ ಕರ್ಮಾನುಸಾರವಾಗಿಯೇ ಮಾಡಿಸಲ್ಪಡುತ್ತದೆ ಎಂದು ನೋಡುವನೋ, ಮತ್ತು ಯಾವ ಜೀವಿಯು ತಾನು ಸ್ವತಂತ್ರ ಕರ್ತೃವಲ್ಲವೆಂದು ತಿಳಿದು ನೋಡುವನೋ, ಅವನು ಪರಮಾತ್ಮನನ್ನು (ಅಪರೋಕ್ಷವಾಗಿ) ನೋಡುತ್ತಾನೆ.

**ವಿವರಣೆ:** ಬ್ರಹ್ಮ ಮತ್ತು ಕರ್ಮ ಇವೆರಡೂ ಫಲ ಕಾರಣಗಳು. ಆದರೆ ಬ್ರಹ್ಮನು ಕರ್ತೃವಾಗಿ ಫಲ ಕಾರಣ ಮತ್ತು ಕರ್ಮವು ಕರಣವಾಗಿ ಫಲಕಾರಣ, ಸಮಾನ ರೀತಿಯಿಂದಲ್ಲ ಎಂಬ ಪ್ರಮೇಯವನ್ನು ವಿವರಿಸಲು, ಶ್ರೀ ರಾಯರು ಬ್ರಹ್ಮ ಸೂತ್ರವನ್ನು ಉಲ್ಲೇಖಿಸಿರುವರು

**ಓಂ || ಪೂರ್ವಂ ತು ಬಾದರಾಯಣೋ ಹೇತುವ್ಯಪದೇಶಾತ್ || ಓಂ** **(ಸೂತ್ರ 3-2-42)**

**ಹೇತುವ್ಯಪದೇಶಾತ್** = ಬ್ರಹ್ಮನಲ್ಲಿ ಸ್ವತಂತ್ರ ಕರ್ತೃತ್ವದ ಕಾರಣವನ್ನು 'ಪುಣ್ಯೇನ ಪುಣ್ಯಂ ಲೋಕಂ ನಯತಿ" ಮುಂತಾದ ಶ್ರತಿಗಳಲ್ಲಿ ಹೇಳಿರುವಂತೆ, ಮತ್ತು **ಪೂರ್ವಂ ತು ಬಾದರಾಯಣೋ** = ಹಿಂದೆಯೇ ಶ್ರೀ ಬಾದರಾಯಣರು ಹೇಳಿರುವಂತೆ.

ಪರಮಾತ್ಮನು ಆಯಾ ಜೀವರ ಪೂರ್ವ ಕರ್ಮಗಳನ್ನು ಅನುಸರಿಸಿಯೇ ಕರ್ಮಗಳನ್ನು ಮಾಡಿಸಿ ಫಲ ಕೊಡುವನು. ಆದ್ದರಿಂದ ಪರಮಾತ್ಮನಲ್ಲಿ ವೈಶಮ್ಯಾದಿ ದೋಷಗಳಿಲ್ಲ ಎಂಬುದನ್ನೂ ವಿವರಿಸಲು ಇನ್ನೊಂದು ಸೂತ್ರವನ್ನು ಶ್ರೀ ರಾಯರು ಉಲ್ಲೇಖಿಸಿರುವರು:

**ಓಂ || ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ತಥಾ ಹಿ ದರ್ಶಯತಿ || ಓಂ (ಸೂತ್ರ 2-1-35)**

**ವೈಷಮ್ಯನೈರ್ಘೃಣ್ಯೇ** ನ = ಕೆಲವರಿಗೆ ಸುಖ, ಕೆಲವರಿಗೆ ದುಃಖ ಕೊಡುವಾಗ ಪರಮಾತ್ಮನಲ್ಲಿ ಪಕ್ಷಪಾತ, ಕ್ರೌರ್ಯ ಎಂಬ ದೋಷಗಳಿಲ್ಲ, ಏಕೆಂದರೆ, **ಸಾಪೇಕ್ಷತ್ವಾತ್** = ಈಶ್ವರನು ಜೀವಿಗಳ ಪೂರ್ವ ಕರ್ಮಗಳನ್ನು ಅನುಸರಿಸಿಯೇ ಕರ್ಮಗಳನ್ನು ಮಾಡಿಸಿ ಫಲ ಕೊಡುವನು, ಕಾರಣವೇ ಇಲ್ಲದೆ ಕೊಡಲಾರನು, ಏಕೆಂದರೆ **ತಥಾ ಹಿ ದರ್ಶಯತಿ** = ('ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಂ' ಮುಂತಾದ) ಶ್ರುತಿಗಳು ಹೇಳಿರುವುದರಿಂದ .

**ಆಕರ ಗ್ರಂಥಗಳು:**


(1)ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ವಿದ್ವಾಂಸರಿಂದ ವಿರಚಿತವಾದ 'ಗೀತಾ ವಿವೃತಿಯ ಕನ್ನಡ ಅನುವಾದ ಗ್ರಂಥ

(2)ಶ್ರೀ ಸತ್ಯಧ್ಯಾನ ಶ್ರೀಪಾದವಿರಚಿತ 'ಗೀತಾಪ್ರತಿಪದಾರ್ಥಚಂದ್ರಿಕಾ'

(3) ಶ್ರೀ ರಾಘವೇಂದ್ರ ತೀರ್ಥ ವಿರಚಿತ 'ತಂತ್ರದೀಪಿಕಾ' (ಕನ್ನಡ ಅನುವಾದ ವಿದ್ವಾನ್ ಡಿ. ಪ್ರಹ್ಲಾದಾಚಾರ್ಯ)

(4) ಬ್ರಹ್ಮಸೂತ್ರನಾಮಾವಳಿ: - ಶ್ರೀ ಪ್ರಭಂಜನಾಚಾರ್ಯ ವಿರಚಿತ


|| ಶ್ರೀ ವಾಸುದೇವಾರ್ಪಣಮಸ್ತು||